## ಕಪ್ಪೆಚಿಪ್ಪು ಗಣಪ

ಸಾಸಿವೆ ಕಾಳು ಗಣಪ, ಕಡಲೇಕಾಳು ಗಣಪನನ್ನು ನಮ್ಮ ಕರ್ನಾಟಕದಲ್ಲೇ ನೋಡಬಹುದು. ಆದರೆ ಈ ಕಪ್ಪೆಚಿಪ್ಪು ಗಣಪನನ್ನು ನೋಡಬೇಕಾದರೆ ಕೋಲ್ಕತ್ತಾದ ರವೀಂದ್ರನಾಥ ಟ್ಯಾಗೋರ್‌ರ ಶಾಂತಿನಿಕೇತನಕ್ಕೆ ಹೋಗಬೇಕು. ಈ ಶ್ರೀಜನಿ ಶಿಲ್ಪ ಕಲಾ ಕೇಂದ್ರವನ್ನು (ಶಿಲ್ಪ ಗ್ರಾಮ ಕಾಂಪ್ಲೆಕ್ಸ್) ಉದ್ಘಾಟಿಸಿದವರು ಅಂದಿನ ಪ್ರಧಾನಿ ಕನ್ನಡಿಗ ದೇವೇಗೌಡರು ಎಂಬುದು ಮತ್ತೊಂದು ವಿಶೇಷ. ರೆಪ್ಪೆಗಳ ಮಧ್ಯೆ ಅರಳಿದ ನಯನದಂತೆ ನಯನ ಮನೋಹರವಾಗಿರುವ ಈ ಪುಟ್ಟ ಗಣಪ ಗಾತ್ರದಲ್ಲಿ ಚಿಕ್ಕದಾಗಿದ್ದರೂ ಗಮನಸೆಳೆಯುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ





## ಪಪ್ಪಾಯಿ ಒಳಗೆ ಏನಿದು?

ಪಪ್ಪಾಯಿ (ಪರಂಗಿ ಹಣ್ಣು) ಎಲ್ಲರೂ ಬಲ್ಲರು. ಅದರೊಳಗಿರುವ ಕಪ್ಪು ಬೀಜಗಳೂ ಗೊತ್ತು. ಆದರೆ, ಈ ಬಾರಿ ಎಳೆಯ ಪಪ್ಪಾಯಿಯನ್ನು ಸಾಂಬಾರು ಮಾಡಲು ಕತ್ತರಿಸಿದಾಗ ಒಳಗಿದ್ದ ಈ ರಚನೆಯನ್ನು ಕಂಡು ಅಚ್ಚರಿಗೊಂಡೆ. ಬೀಜವೂ ಅಲ್ಲದ ಕಾಯಿಯೂ ಅಲ್ಲದ ಇದೇನೆಂದು ತಿಳಿಯದಾಗಿದೆ. ಸಾಮಾನ್ಯವಾಗಿ ಎಳೆಯ ಪಪ್ಪಾಯಿಯಲ್ಲೂ ಅದರ ಬೀಜಗಳು ಇರುತ್ತದೆ. ಆದರೆ, ಈ ಪಪ್ಪಾಯಿಯಲ್ಲಿ ಕಂಡುಬಂದದ್ದು ಕೊಂಚ ವಿಭಿನ್ನವಾಗಿದೆ.

—ಅಶ್ವಿನಿ ಮೂರ್ತಿ ಅಯ್ಯನಕಟ್ಟೆ, ಸುಳ್ಯ

## ಟ್ರೈಬಲ್ ಮ್ಯೂಸಿಯಂ

ಚಿತ್ರದಲ್ಲಿ ಕಾಣುತ್ತಿರುವುದು ಅರಕು ಕಣಿವೆಯ (Araku Valley) ಟ್ರೈಬಲ್ ಮ್ಯೂಸಿಯಂನ ಪ್ರವೇಶ ದ್ವಾರ. ಅದರ ಮೇಲೆ ಗಿರಿಜನರ ವೇಷಭೂಷಣದಲ್ಲಿ ಕಂಗೊಳಿಸುತ್ತಿರುವ ಗೊಂಬೆಗಳು ನೋಡುಗರನ್ನು ತನ್ನತ್ತ ಆಕರ್ಷಿಸುತ್ತವೆ. ಅರಕು ಕಣಿವೆ ವಿಶಾಖಪಟ್ಟಣಂನಿಂದ 115 ಕಿಲೋ ಮೀಟರ್ ದೂರದ ಪೂರ್ವ ಘಟ್ಟಗಳ ಸೆರಗಿನಲ್ಲಿದೆ. ಅರಕುಗೆ ಭೇಟಿ ನೀಡಿದಾಗ ಈ ಗೊಂಬೆಗಳು ಗಮನ ಸೆಳೆದು ಕ್ಯಾಮೆರಾದಲ್ಲಿ ಸೆರೆಯಾದವು. ಅಲ್ಲಿಗೆ ಹೋದವರು ಮರೆಯದೆ ಮ್ಯುಸಿಯಂಗೆ ಭೇಟಿ ನೀಡಿ.

—ವೆಂಕಟೇಶ ಮುದಗಲ್, ಕಲಬುರ್ಗಿ

